"ಅವನನ್ನ ನೀನು ಮನೆಗೆ ಕರಿಸಿಕೊಂಡು ಟೀ ಬಿಸ್ಕಿಟ್ ಎಲ್ಲ ಕೊಟ್ಟು ಸತ್ಕರಿಸಿ ಗಂಟೆಗಟ್ಟಲೆ ಮಾತಾಡಿದೆಯಂತೆ?"

ಸುಲತಾ ದಾದಾನ ಪ್ರಶ್ನೆಗೆ ಉತ್ತರ ನೀಡದೆ ಗಂಭೀರವಾಗಿ ಕೇಳಿದಳು, "ನಿಮಾಯ್, ನಿಮ್ಮೂರಿಗೆ ಹೋಗೋಕೆ ಎಷ್ಟು ದುಡ್ಡು ಬೇಕು?"

ನಿಮಾಯ್ ಬಹಳ ವಿನೀತನಾಗಿ, ಅಸಹಾಯಕತೆಯಿಂದ ನುಡಿದ, "ದಾದಾಬಾಬು ನನಗೆ ಮನೆ ನೋಡ್ಕೊಳೋಕೆ ಹೇಳಿದ್ರು".

"ಬಹಳ ಚೆನ್ನಾಗಿ ನೋಡ್ಕೊಂಡಿದಿಯಾ? ಆದರೆ, ನಾನು ಏನು ಹೇಳಿದ್ದೆ? ದಾದಾ ಮನೆಗೆ ಕಾಲಿಡುತ್ತಿದ್ದಂತೆಯೇ ಇಡೀ ದಿನದ ವಿಷಯ ಹೇಳು ಅಂತ ಹೇಳಿದ್ದೆನಾ?"

"ನೀವು ಆ ಬೀದಿ ಭಿಕಾರಿಯ ಮಾತನ್ನ ನಂಬ್ತೀರಾ ದೀದಿ?"

"ನನ್ನೆದುರಿಗೆ ನಿಂತಿರಬೇಡ, ತೊಲಗು ಇಲ್ಲಿಂದ!"

"ಸರಿ ದೀದಿ" ಮೃದು ಸ್ವರದಲ್ಲಿ ಹೇಳುತ್ತಾ ನಿಮಾಯ್ ನಿರ್ಗಮಿಸಿದ.

ಸುಲತಾ ನುಡಿದಳು, "ಕೈಕಾಲು ತೊಳ್ಕೊಂಡು ಬಾ ದಾದಾ, ನಾನಿನ್ನು ಚಾ ಕುಡಿದಿಲ್ಲ."

"ಚಾ ಕುಡಿದಿಲ್ವಾ? ಆ ಗೂಂಡಾ ಜೊತೆ ಕೂತ್ಕೊಂಡು ಕುಡಿದಿದ್ದೀಯಲ್ವಾ?"

"ನನಗೆ ಕೋಪ ಬರಿಸ್ಬೇಡ ದಾದಾ, ನನಗೀಗಾಲೇ ಆ ನಿಮಾಯ್ ಮೇಲೆ ಅಸಾಧ್ಯ ಕೋಪ ಬಂದಿದೆ! ಹೇಳ್ತೀನಿ, ನಿನಗೆ ಎಲ್ಲ ಹೇಳ್ತೀನಿ. ಹೇಳದೆ ಇರೋಕೆ ಆಗುತ್ತಾ? ನಿನ್ನ ಹತ್ತಿರಾನೂ ಬರ್ತಾನೆ ಅವನು ಎಂಟು ಗಂಟೆಗೆ."

"ನನ್ನ ಹತ್ತಿರ ಬರ್ತಾನಾ!?"

"ಹಾಂ ದಾದಾ, ನಿನ್ನ ಹತ್ತಿರ ಪತ್ರ ಬರಿಸ್ಕೋಳೋಕೆ ಬರ್ತೀನಿ ಅಂತ ಹೇಳಿದಾನೆ" ಬಹು ಅಪ್ಯಾಯಮಾನವಾದ ಮೃದು ಸ್ವರದಲ್ಲಿ ಹೇಳಿದಳು ಸುಲತಾ.

ಅಸಿತ್ ಮುಖ ಕೋಪದಿಂದ ಕೆಂಪಗಾಯಿತು. ಜೋರಾಗಿ ಕಿರುಚಿ ಹೇಳಿದ, "ನಿಮಾಯ್‌ನ ಊರಿಗೆ ಕಳಿಸಬೇಕಾಗಿಲ್ಲ, ನಿನ್ನನ್ನ ಊರಿಗೆ ಕಳಿಸ್ಬೇಕು. ನಾಳೆನೇ ಬಾಬಾ ಹತ್ತಿರ ಕಳುಹಿಸ್ತೀನಿ ನಿನ್ನ".

"ಹೌದಾ? ಕಳುಹಿಸು!" ಸುಲತಾಗೂ ಬೆಂಕಿಯುಗಳೋಕೆ ಬರುತ್ತೆ. "ಯಾರಿಗೆ ಮಾನವೀಯತೆಯಿಲ್ಲವೋ ಅವರು ಹೀಗೆ ಮಾತಾಡೋದು. ನೋಡೋಕೆ ಸ್ವಲ್ಪ ಕುರೂಪಿ, ಅಷ್ಟಕ್ಕೇ ಅವನನ್ನ ಬದ್ಮಾಶ್ ಅಂತೀಯಾ? ಪಾಪ! ಅವನು ತುಂಬಾ ದುಃಖಿತ, ಗೊತ್ತಾ ದಾದಾ? ಅವನ ಒಬ್ಬನೇ ಮಗ..."

"ಸತ್ತೋಗಿದಾನೆ ತಾನೇ? ಟಿ.ಬಿ. ಕಾಯಿಲೆ ಅಥವಾ ಆಕ್ಸಿಡೆಂಟ್? ಕೋಲ್ಕತ್ತದ ಗಲ್ಲಿಗಲ್ಲಿಗಳಲ್ಲಿ ಈ ತರದ ಸಾವಿರಾರು ಕತೆಗಳಿವೆ ಗೊತ್ತಾ? ನಿನ್ನ ಹತ್ತಿರ ಎಷ್ಟು ದುಡ್ಡು ಕಿತ್ಕೊಂಡ ಹೋದ?"

"ದಾದಾ, ಕಿವಿಗೊಟ್ಟು ಕೇಳ್ತೀಯೋ ಅಥವಾ ಸುಮ್ಮನೆ ವಾದ ಮಾಡ್ತೀಯೋ? ಅವನು ದುಡ್ಡು ಕಾಸು ಕೇಳಲೇ ಇಲ್ಲ. ಅವನು ಕೇವಲ ನಮ್ಮ ವಿಳಾಸ ಉಪಯೋಗಿಸಿಕೊಳ್ಳಬೇಕು ಅಂತ ಕೇಳ್ತಾ ಇದ್ದ."

ಮತ್ತೆ ಅದೇ ವಿಳಾಸ!

ಅಸಿತ್‌ಗೆ ಗೊತ್ತಾಯ್ತು. ಮೂಲ ಕಾರಣ ಇದೇ. ತಂಗಿಯ ದಡ್ಡತನಕ್ಕೆ ಹತಾಶನಾದ. ಕಟು ವ್ಯಂಗ್ಯವಾಗಿ ಕೇಳಿದ, "ನಿನಗೇನು ಅರ್ಥಮಾಡಿಸಿದ ಅವನು, ಹೇಳು?"

"ಅರ್ಥಮಾಡಿಕೊಳ್ಳೋಕೆ ಏನಿದೆ ಅಲ್ಲಿ? ನಿಜ ಏನಿತ್ತೋ ಅದನ್ನೇ ಹೇಳಿದಾನೆ. ಅವನು ಸರ್ಕಾರಕ್ಕೆ ಒಂದು ಅರ್ಜಿ ಕೊಡಬೇಕು. ಆದರೆ, ಅವನಿಗೆ ಸ್ವಂತ ವಿಳಾಸವೇ ಇಲ್ಲ. ಒಂದು ಮನೆಯನ್ನು ಬಾಡಿಗೆ ತೆಗೆದುಕೊಳ್ಳೋದಕ್ಕೂ ಅವನ ಹತ್ತಿರ ದುಡ್ಡಿಲ್ಲ. ರಸ್ತೆಯೇ ಮನೆ, ಫುಟ್‌ಪಾತಲ್ಲಿ ಮಲಗ್ತಾನೆ,